# ಕ್ರಿ ಶ.1924ರ ಐತಿಹಾಸಿಕ ಬೆಳಗಾವಿ ಕಾಂಗ್ರೆಸ್ ಅಧಿವೇಶನ ಮತ್ತು ಅದರ ಪ್ರಭಾವ

**ಆಯಿಶ ಸಿದ್ದಿಖ ಕೆ.ಹೆಚ್.**

ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಶಾಲನಗರ, ಕೊಡಗು.

DOI: https://doi.org/10.5281/zenodo.17411457

## ABSTRACT:

ಈ ಲೇಖನವು ಕರ್ನಾಟಕದ ಬೆಳಗಾವಿಯಲ್ಲಿ ನಡೆದ ಹಾಗೂ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಅಧ್ಯಕ್ಷತೆಯನ್ನು ವಹಿಸಿದ್ದ ಏಕೈಕ ರಾಷ್ಟ್ರೀಯ ಕಾಂಗ್ರೆಸ್ ಸಮಾವೇಶವಾದ 1924ರ ಐತಿಹಾಸಿಕ ಬೆಳಗಾಂ ಕಾಂಗ್ರೆಸ್ ಅಧಿವೇಶನದ ಚಿತ್ರಣವನ್ನು ಒಳಗೊಂಡಿದೆ. ಬೆಳಗಾಂ ಕಾಂಗ್ರೆಸ್ ಅಧಿವೇಶನದ ರೂಪರೇಷೆಗಳು, ಮಹತ್ವ, ಪರಿಣಾಮಗಳು, ಕರ್ನಾಟಕದ ಸ್ವತಂತ್ರ ಚಳುವಳಿಯಲ್ಲಿ ಈ ಅಧಿವೇಶನದ ಪಾತ್ರವನ್ನು ತಿಳಿಯುವುದು. ಗಾಂಧೀಜಿಯವರ ಅಧ್ಯಕ್ಷತೆ ಹಾಗೂ ಗಾಂಧೀಜಿಯವರ ವಿಚಾರಧಾರೆಗಳು, ಮೂಲ ಮಂತ್ರಗಳು, ಚಳುವಳಿಗಳು ಜನಮಾನಸದ ಮೇಲೆ ಹೇಗೆ ಪ್ರಭಾವ ಬೀರಿದವು. ಈ ಸಮ್ಮೇಳನವು ದೊಡ್ಡಮಟ್ಟದ ಆಂದೋಲನವಾಗಿ ಜಾತಿ ಮತ ಲಿಂಗ ಭೇದವಿಲ್ಲದೆ ರಾಷ್ಟ್ರವ್ಯಾಪಿ ಸ್ವಾತಂತ್ರ್ಯ ಹೋರಾಟಕ್ಕೆ ಜನತೆಗೆ ಹೇಗೆ ಸ್ಫೂರ್ತಿ ನೀಡಿತು, ಎಂಬುದನ್ನು ಅರಿಯುವುದು. ಇದರ ವರ್ಚಸ್ಸು ಬ್ರಿಟಿಷರ ಗಮನವನ್ನು ಸೆಳೆಯಿತು. ಅದುವರೆಗೂ ಕೇವಲ ಬ್ರಾಹ್ಮಣರ ಸಂಘ ಎಂದು ಸೀಮಿತವಾಗಿದ್ದ ರಾಷ್ಟ್ರೀಯ ಕಾಂಗ್ರೆಸ್ ಈ ಅಧಿವೇಶನದಿಂದ ಹೇಗೆ ರಾಷ್ಟ್ರದ ಸಮಗ್ರ ಜನತೆಯನ್ನು ಪ್ರತಿನಿಧಿಸುವ ಸಂಸ್ಥೆಯಾಗಿ ಶಕ್ತಿಯಾಗಿ ಬೆಳೆಯಿತು ಎಂಬುದನ್ನು ಅರಿಯಬಹುದು. ಅಧಿವೇಶನದಲ್ಲಿ ಪಾಲ್ಗೊಂಡ ಅನೇಕ ರಾಷ್ಟ್ರ ನಾಯಕರ ಭಾಷಣಗಳು, ಸಿದ್ಧಾಂತಗಳು, ಹೋರಾಟದ ಹಾದಿ ಜನರನ್ನು ಹೇಗೆ ಹುರಿದುಂಬಿಸಿದವು ಹಾಗೂ ಈ ಅಧಿವೇಶನವೂ ಒಂದು ಐಕ್ಯತಾ ಸಮ್ಮೇಳನವಾಗಿದ್ದು ಇದರಲ್ಲಿ ಕಾಂಗ್ರೆಸ್ನ ಬಣಗಳು ಹಾಗೂ ಸ್ವರಾಜ್ಯ ಪಕ್ಷ ಎಲ್ಲವೂ ಕಾಂಗ್ರೆಸ್ಸಿನಲ್ಲಿ ಲೀನವಾದವು. ಅಲ್ಲದೆ ಇದು ಹಿಂದೂಮುಸ್ಲಿಮ್ ಐಕ್ಯತೆಯನ್ನು ಹಾಗೂ ಹಾಗೂ ಅಸ್ಪೃಶ್ಯತಾ ನಿವಾರಣೆಯನ್ನು ಪ್ರತಿಪಾದಿಸಿತು. ಈ ಲೇಖನವು, ಗಾಂಧೀಜಿಯವರ ಸಾಮೀಪ್ಯ ಕನ್ನಡಿಗರ ಮೇಲೆ ಬೀರಿದ ಪ್ರಭಾವ, ಮೈಸೂರು ಕಾಂಗ್ರೆಸ್ ಸ್ಥಾಪನೆಯ ಮೇಲೆ ಹಾಗೂ ಕರ್ನಾಟಕದ ಏಕೀಕರಣದ ಮೇಲೆ ಬೆಳಗಾಂ ಕಾಂಗ್ರೆಸ್ ಅಧಿವೇಶನದ ಪ್ರಭಾವವನ್ನು ಸಹ ವಿವರಿಸುತ್ತದೆ. ಒಟ್ಟಾರೆಯಾಗಿ ಈ ಸಂಶೋಧನಾ ಲೇಖನವು ಐತಿಹಾಸಿಕ ಬೆಳಗಾಂ ಕಾಂಗ್ರೆಸ್ ಅಧಿವೇಶನದ ಮಹತ್ವವನ್ನು ಎತ್ತಿ ತೋರಿಸುತ್ತದೆ.

## KEYWORDS:

ಬೆಳಗಾಂ ಕಾಂಗ್ರೆಸ್ ಅಧಿವೇಶನ, ಮಹಾತ್ಮ ಗಾಂಧೀಜಿ, ಕರ್ನಾಟಕ ಏಕೀಕರಣ, ಸ್ವಾತಂತ್ರ್ಯ ಚಳುವಳಿ, ಐಕ್ಯತಾ ಸಮ್ಮೇಳನ.

**ಪೀಠಿಕೆ:**

ಬೆಳಗಾಂ ಕಾಂಗ್ರೆಸ್ ಅಧಿವೇಶನ ಭಾರತ ಹಾಗೂ ಕರ್ನಾಟಕದ ಸ್ವಾತಂತ್ರ್ಯ ಚಳುವಳಿಯ ಇತಿಹಾಸದಲ್ಲಿ ಒಂದು ಉಜ್ವಲ ಅಧ್ಯಾಯವಾಗಿದೆ ಇದು ದೇಶದಾದ್ಯಂತ ಸಾವಿರಾರು ಲಕ್ಷಾಂತರ ಸ್ವಾತಂತ್ರ್ಯ ಹೋರಾಟಗಾರರನ್ನು ಕೈಬೀಸಿ ಕರೆಯಿತು. ಈ ಅಧಿವೇಶನದಿಂದ ಕರ್ನಾಟಕದ ಸ್ವಾತಂತ್ರ್ಯ ಚಳುವಳಿ ಹೊಸ ತಿರುವನ್ನು ಪಡೆದು ಸ್ವಾತಂತ್ರ್ಯ

ಹೋರಾಟದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿತು. ಇದು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ 40ನೇ ವಾರ್ಷಿಕ ಅಧಿವೇಶನವಾಗಿದ್ದು, ಕರ್ನಾಟಕದಲ್ಲಿ ನಡೆದ ಹಾಗೂ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಅಧ್ಯಕ್ಷತೆ ವಹಿಸಿದ ಏಕೈಕ ಅಧಿವೇಶನವಾಗಿದ್ದು ಸ್ವಾತಂತ್ರ್ಯ ಇತಿಹಾಸದಲ್ಲಿ ಮೈಲುಗಲ್ಲಾಗಿದೆ. ಇದು ಇಡೀ ರಾಜ್ಯ ದೇಶ ಅಷ್ಟೇ ಅಲ್ಲದೆ ಬ್ರಿಟೀಷರ ಗಮನವನ್ನೂ ಸೆಳೆದಿತ್ತು. ಇದು ರಾಜಕೀಯ ಸ್ವಾತಂತ್ರ್ಯ ಮತ್ತು ಸಾಮಾಜಿಕ ಸುಧಾರಣಾ ಚಟುವಟಿಕೆಗಳನ್ನೊಳಗೊಂಡಿದ್ದು, ದೊಡ್ಡಮಟ್ಟದ ಹೋರಾಟಕ್ಕೆ ಸಾಕ್ಷಿಯಾಗಿದೆ. ಇಂದು 1924ರ ಬೆಳಗಾವಿ ಕಾಂಗ್ರೆಸ್ ಅಧಿವೇಶನಕ್ಕೆ ಶತಮಾನೋತ್ಸವದ ಸಂಭ್ರಮ, ಇದು ತನ್ನದೇ ಆದ ಹಲವು ವಿಶೇಷತೆ ಹಾಗೂ ಮಹತ್ವಗಳನ್ನು ಒಳಗೊಂಡಿದೆ.

**ಬೆಳಗಾಂ ಕಾಂಗ್ರೆಸ್ ಅಧಿವೇಶನ:**

1924 ರ ಬೆಳಗಾಂ ಕಾಂಗ್ರೆಸ್ ಮಹಾ ಅಧಿವೇಶನದ ಅಧ್ಯಕ್ಷತೆ ಗಾಂಧೀಜಿ ವಹಿಸಿದ್ದು, ಇಲ್ಲಿ ಸ್ಮರಣೀಯ. ಗಾಂಧಿ ಅಧ್ಯಕ್ಷತೆ ವಹಿಸಿದ ಏಕೈಕ ಅಧಿವೇಶನ ಮೇಲಾಗಿ ಅದು ಕರ್ನಾಟಕದಲ್ಲಿಯೇ ಸಂಭವಿಸಿತು. ಪ್ರಾರಂಭದಲ್ಲಿ ಗಾಂಧೀಜಿ ಅಧ್ಯಕ್ಷತೆಯನ್ನು ನಿರಾಕರಿಸಿದ್ದರು ಹಾಗು ಬೆಳಗಾವಿಯಲ್ಲಿ ಸಮ್ಮೇಳನ ನಡೆಸಲು ಅಡೆತಡೆಗಳೂ ಇದ್ದವು ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಗಳಾದ ಗಂಗಾಧರರಾಯರು ಎಲ್ಲಾ ಅಡೆತಡೆಗಳನ್ನು ನಿವಾರಿಸಿ ಗಾಂಧೀಜಿಯವರೇ ಅಧ್ಯಕ್ಷರಾಗುವಂತೆ ಮನವೊಲಿಸಿದರು. ಸ್ವಾತಂತ್ರ್ಯ ಹೋರಾಟದ ಕಿಚ್ಚು ಗಾಂಧಿಯವರನ್ನು ಬೆಳಗಾವಿಗೆ ಆಹ್ವಾನಿಸಿತು. ಗಾಂಧೀಜಿಯವರ ಆಗಮನದಿಂದ ಭಾರತದ, ಕರ್ನಾಟಕದ ಸ್ವತಂತ್ರ ಚಳುವಳಿ ಹೊಸ ಸ್ವರೂಪ ಪಡೆಯಿತು.

ಇದೇ ಕಾಲಕ್ಕೆ ಬಿಜಾಪುರ ಜಿಲ್ಲಾ ಕಾಂಗ್ರೆಸ್, ಕರ್ನಾಟಕದ ಪ್ರಾಂತೀಯ ಸಮ್ಮೇಳನ, ಕರ್ನಾಟಕ ಖಿಲಾಫತ್ ಪರಿಷತ್ತು, ಭಗಿನಿ ಮಂಡಲ ಪರಿಷತ್ತು, ಸ್ವಯಂಸೇವಕರ ಸಮ್ಮೇಳನ, ಕರ್ನಾಟಕ ಸಾಹಿತ್ಯ ಸಮ್ಮೇಳನ, ಧಾರವಾಡ ಜಿಲ್ಲಾ ಸಮ್ಮೇಳನ ಇವೆಲ್ಲ ಅಲ್ಲಿ ಸಭೆ ಸೇರಿದ್ದವು. ಕಾಂಗ್ರೆಸ್ ವತಿಯಿಂದ 21 ಉಪಸಮಿತಿಗಳು ಏರ್ಪಟ್ಟಿದ್ದವು.

**ಅಧಿವೇಶನದ ಸಿದ್ಧತೆ:**

ಸ್ವಾತಂತ್ರ್ಯ ಪೂರ್ವದಲ್ಲಿ ಕಾಂಗ್ರೆಸ್ ಅಧಿವೇಶನವು ಕರ್ನಾಟಕದಲ್ಲಿ ಒಮ್ಮೆ ಮಾತ್ರ ಸೇರಿತು. ಡಿಸೆಂಬರ್ 26 ರಿಂದ 28 ರ ವರೆಗೆ ಬೆಳಗಾವಿಯಲ್ಲಿ ನಡೆದ ಈ ಅಧಿವೇಶನದ ಸ್ಥಳ ವಿಜಯನಗರ. 85 ಎಕರೆ ಪ್ರದೇಶದಲ್ಲಿ ಈ ನಿವೇಶನವಿತ್ತು. ಭವ್ಯಲಂಕೃತವಾದ ಮಂಟಪಕ್ಕೆ ಹೋಗುವ ಪ್ರವೇಶ ದ್ವಾರವನ್ನು ವಿಜಯನಗರದ ವಿರೂಪಾಕ್ಷ ದ್ವಾರದ ಗೋಪುರದಂತೆ ಅಲಂಕರಿಸಲಾಗಿತ್ತು. ಸಭೆಗೆ ನೀರು ಒದಗಿಸಲು ಮಾಡಿದ ಚಿಕ್ಕ ಕೆರೆಗೆ ಪಂಪಾ ಸರೋವರ ಎಂದು ಕರೆಯಲಾಗಿತ್ತು. ವಿಶಾಲ ಸಭಾ ಮಂಟಪದ ಸುತ್ತ ದೇಶದ ಎಲ್ಲಾ ಪ್ರಾಂತ್ಯಗಳಿಂದ ಬಂದ ಸಾವಿರಾರು ಪ್ರತಿನಿಧಿಗಳಿಗೆ ಸಾಲು ಸಾಲಾಗಿ ಬಟ್ಟೆಯ ಗುಡಾರ ಹಾಕಿದ್ದರು. ಅಧಿವೇಶನದಲ್ಲಿ ಊಟ ಬಡಿಸಲು, ಕಸ ತೆಗೆಯಲು, ನುಗ್ಗಿ ಬರುವ ಸಾವಿರಾರು ಜನರನ್ನು ನಿಯಂತ್ರಿಸಲು, ಸ್ವಚ್ಛತೆ ಮಾಡಲು ಶಿಸ್ತಿನ ಸಮವಸ್ತ್ರ ಧರಿಸಿದ ಸ್ವಯಂಸೇವಕರ ತಂಡ ಇತ್ತು. ಇಡೀ ಪರಿಸರದಲ್ಲಿ ಸಂಪರ್ಕವಿಡಲು ಗಂಗಾಧರರಾಯರು, ಡಾ.ನಾ.ಸೂ ಹರ್ಡೀಕರರು ಕುದುರೆಯ ಮೇಲೆ ಸುತ್ತುತ್ತಿದ್ದರು ಅಧಿವೇಶನಕ್ಕೆ ಏಳು ಅಂತಸ್ತಿನ ಗೋಪುರಗಳನ್ನು ನಿರ್ಮಿಸಲಾಗಿತ್ತು ಪೆಟ್ರೋಮ್ಯಾಕ್ಸ್ ದ್ವೀಪಗಳನ್ನು ತರಲಾಗಿತ್ತು. 90,000 ಖರ್ಚು ಮಾಡಲಾಗಿತ್ತು ಸುಮಾರು 77,000 ಧಾನ್ಯಗಳನ್ನು ಸಾಲರೂಪದಲ್ಲಿ ಪಡೆಯಲಾಗಿತ್ತು ಮಹಾತ್ಮನನ್ನು ಬೃಹತ್ ಮೆರವಣಿಗೆಯಲ್ಲಿ ಸ್ವಾಗತಿಸಲು ಹೆಚ್ಚಿನ ಮಹಿಳೆಯರು ಹಾಜರಿದ್ದರು.

**ಅಧಿವೇಶನಕ್ಕೆ ಆಗಮಿಸಿದ್ದ ಗಣ್ಯರು:**

ಈ ಸಭೆಯಲ್ಲಿ ರಾಷ್ಟ್ರ ನಾಯಕರಾದ ಮಹಾತ್ಮ ಗಾಂಧೀಜಿ, ಸರ್ದಾರ್ ವಲ್ಲಬಾಯ್ ಪಟೇಲ್, ಮದನ ಮೋಹನ ಮಾಳವೀಯ, ಮೌಲಾನ ಆಜಾದ್, ಜಮ್ನಾಲಾಲ್ ಬಜಾಜ್, ಸರೋಜಿನಿ ನಾಯ್ಡು, ರಾಜೇಂದ್ರ ಪ್ರಸಾದ, ಸಿ. ರಾಜಗೋಪಾಲಚಾರಿ, ಅನಿಬೆಸೆಂಟ್, ಸೈಫುದ್ದೀನ್ ಕಿಚ್ಲು, ಲಾಲಲಜಪತರಾಯ್, ಜವಾಹರಲಾಲ್ ನೆಹರು, ಮೋತಿಲಾಲ್ ನೆಹರು, ಚಿತ್ತರಂಜನ್‌ದಾಸ್ ಮಹಮ್ಮದಾಲಿ ಮತ್ತು ಆಲಿ ಸಹೋದರರು ಶೌಕತ್ ಖುರೇಷಿ. ಹಾಗೂ ಕರ್ನಾಟಕದಿಂದ ಎಸ್ ನಿಜಲಿಂಗಪ್ಪ, ವೆಂಕಟಪ್ಪ, ವೀರಣ್ಣಗೌಡ, ಗಂಗೂಬಾಯ್ ಹಾನಗಲ್, ಜಿ ದೇಶಪಾಂಡೆ, ಹರ್ಡೀಕರ್ ಮಂಜಪ್ಪ, ನಾ.ಸು. ಹರ್ಡೀಕರ್, ಕೆ ಸದಾಶಿವರಾಯ, ಹೆಚ್ ನಾರಾಯಣರಾಯ ವೀಣೆ ಶೇಷಣ್ಣ, ಹನುಮಂತ್ ರಾವ್ ಕೌಜಲಗಿ, ಎನ್ ಎಸ್ ಸುಬ್ಬರಾವ್, ಡಿ.ಕೆ. ಭಾರದ್ವಾಜ್, ಕಮಲಾದೇವಿ ಚಟ್ಟೋಪಾಧ್ಯಾಯ, ಯಶೋದರಮ್ಮ ದಾಸಪ್ಪ, ಗೌರಮ್ಮ, ಬಳ್ಳಾರಿ ಸಿದ್ದಮ್ಮ ಹಾಗೂ ಕೊಡಗಿನ ಅನೇಕ ಗಣ್ಯ ನಾಯಕರು ಸೇರಿದಂತೆ ಒಟ್ಟು 25000 ಮಂದಿ ಅಧಿವೇಶನದಲ್ಲಿ ಭಾಗವಹಿಸಿದ್ದರು.

ಡಾ. ನಾ.ಸು. ಹರ್ಡೀಕರ್ ಹುಬ್ಬಳ್ಳಿಯಲ್ಲಿ ಸ್ಥಾಪಿಸಿದ ಹಿಂದುಸ್ತಾನಿ ಸೇವಾದಳದ 1700 ಸ್ವಯಂಸೇವಕರು ಈ ಅಧಿವೇಶನದ ವ್ಯವಸ್ಥೆ ನೋಡಿಕೊಂಡರು. ಸೇವಾದಳದ ಕಾರ್ಯಕರ್ತರ ಶಿಸ್ತು ಮತ್ತು ಸೇವಾ ಮನೋಭಾವನೆ ಎಲ್ಲಾ ನಾಯಕರನ್ನು ಆಕರ್ಷಿಸಿತು. ಇದರ ಮೂಲಕ ಡಾ. ನಾ.ಸು. ಹರ್ಡೀಕರ್ ರಾಷ್ಟ್ರನಾಯಕರಾದರು.

ಸ್ವಾಗತ ಸಮಿತಿಯ ಅಧ್ಯಕ್ಷ ಜಿ. ದೇಶಪಾಂಡೆಯವರು, ಖಾದಿ, ಅಹಿಂಸೆ, ಹರಿಜನ ಸೇವೆ, ಸತ್ಯಾಗ್ರಹ, ವಿದೇಶಿ ವಸ್ತುಗಳ ಬಹಿಷ್ಕಾರ, ಸ್ವದೇಶಿ ಇತ್ಯಾದಿ ಗಾಂಧಿ ತತ್ವಗಳನ್ನು ಕನ್ನಡಿಗರಿಗೆ ಪರಿಚಯಿಸಿದರು.

**ಅಧ್ಯಕ್ಷರ ಭಾಷಣ:**

ಗಾಂಧೀಜಿ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ, ಬ್ರಿಟಿಷರ ದಬ್ಬಾಳಿಕೆಯ ಬಗ್ಗೆ ಮತ್ತು ಅಹಿಂಸಾತ್ಮಕ ಅಸಹಕಾರವು ಹೇಗೆ ಮುಂದುವರೆಯುವ ಮಾರ್ಗವಾಗಿದೆ ಎಂಬುದರ ಕುರಿತು ಮಾತನಾಡಿದರು ಅದರ ಭಾಗಶಃ ಯಶಸ್ಸು ಕೂಡ ನಮ್ಮನ್ನು ಸ್ವರಾಜ್ಯಕ್ಕೆ ಹತ್ತಿರ ತಂದಿದೆ ಎಂದು ಹೇಳಿದರು. ನಾಡಿನ ಏಕತೆ, ಸ್ವರಾಜ್ಯ ಸಾಧನಗೆ ಅಡ್ಡಿಯಾಗಿರುವ ಅಸ್ಪೃಶ್ಯತೆ ಹಾಗೂ ಹಿಂದೂ ಮುಸ್ಲಿಮ್ ಬಿನ್ನಾಭಿಪ್ರಾಯಗಳನ್ನು ನಿವಾರಿಸಲು ಗಾಂಧೀಜಿ ಈ ಅಧಿವೇಶನದಲ್ಲಿ ಕರೆ ನೀಡಿದರು. ವಿದೇಶಿ ಬಟ್ಟೆಗಳನ್ನು ಬಹಿಷ್ಕರಿಸುವ ಮತ್ತು ಚರಕವನ್ನು ಅಳವಡಿಸಿಕೊಳ್ಳುವ ಬಗ್ಗೆ ತಮ್ಮ ನಿಲುವನ್ನು ವಿವರಿಸಿದರು. ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಕ್ರಮವು ಸಾಮಾಜಿಕ ಕಾರ್ಯಗಳ ಮೇಲೆ ಕೇಂದ್ರೀಕರಿಸಬೇಕೆಂದು ಗಾಂಧೀ ಬಯಸಿದ್ದರು. ಗೋಹತ್ಯೆ ನಿಷೇಧ, ಮದ್ಯಪಾನ ನಿಷೇಧ, ಮಾದಕ ವಸ್ತುಗಳ ನಿರ್ಭಂದ, ಸಾಗರೋತ್ತರ ಭಾರತೀಯರ ರಕ್ಷಣೆ, ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳನ್ನು ನಿರ್ವಹಿಸುವಂತೆ ಅವರು ಕಾಂಗ್ರೆಸ್ ಕಾರ್ಯಕರ್ತರಿಗೆ ಕರೆ ನೀಡಿದರು. ವಿದೇಶಗಳಲ್ಲಿ ಭಾರತೀಯರನ್ನು ನಡೆಸಿಕೊಳ್ಳುವ ಬಗ್ಗೆ ಕಳವಳ ವ್ಯಕ್ತಪಡಿಸಿದ ಅವರು, ಜನಾಂಗೀಯ ದಬ್ಬಾಳಿಕೆಯನ್ನು ಖಂಡಿಸಿದರು.

ಗಾಂಧೀಜಿ ಸ್ವಾತಂತ್ರ್ಯ ಹೋರಾಟಗಾರರ ಮುಂದಿನ ಹಾದಿಯ ಕುರಿತು ಮಾತನಾಡಿದರು. “ಕಾರ್ಯಕ್ರಮ ವಿಫಲವಾದರೆ ಅಹಿಂಸಾತ್ಮಕ ಅಸಹಾರ ಪುನರಾರಂಭಿಸಲಾಗುತ್ತದೆ. ಸತ್ಯಾಗ್ರಹವು ಎಂದಿಗೂ ವಿಫಲವಾಗುವುದಿಲ್ಲ ಮತ್ತು ಸತ್ಯವನ್ನು ಸಮರ್ಥಿಸಲು ಒಬ್ಬ ಪರಿಪೂರ್ಣ ಸತ್ಯಾಗ್ರಹಿ ಸಾಕು ಎಂದು ನಾನು ಪದೇ ಪದೇ ಹೇಳಿದ್ದೇನೆ.

ನಾವೆಲ್ಲರೂ ಪರಿಪೂರ್ಣ ಸತ್ಯಾಗ್ರಹಿಗಳಾಗಲು ಶ್ರಮಿಸೋಣ, ಸತ್ಯಾಗ್ರಹವು ಒಳಗಿನ ಚೈತನ್ಯದ ಲಕ್ಷಣವಾಗಿದೆ. ಅದು ನಮ್ಮಲ್ಲಿ ಪ್ರತಿಯೊಬ್ಬರಲ್ಲೂ ಸುಪ್ತವಾಗಿದೆ. ಸ್ವರಾಜ್ಯದಂತೆ ಅದು ನಮ್ಮ ಜನ್ಮಸಿದ್ಧ ಹಕ್ಕು. ವಂದೇ ಮಾತರಂ"

"ಧರ್ಮಗಳನ್ನು ರಾಷ್ಟ್ರಗಳಂತೆ ತೂಗಿ ಅಳೆಯಬೇಕು. ಅನ್ಯಾಯ, ಅಧರ್ಮ ಮತ್ತು ಅಹಿಂಸೆಗಳನ್ನು ಆಚರಿಸುವ ರಾಷ್ಟ್ರಗಳು ಮತ್ತು ಧರ್ಮಗಳು ಈ ಭೂಮಿಯಿಂದ ಅಳಿಸಿ ಹೋಗುತ್ತವೆ. ದೇವರ ಕೃಪೆ ಮತ್ತು ದಿವ್ಯ ಜ್ಞಾನವು ಯಾವುದೇ ದೇಶ ಅಥವಾ ಜನಾಂಗದ ಸ್ವತ್ತಲ್ಲ. ದೇವರನ್ನು ನಂಬಿದವರಿಗೆಲ್ಲರಿಗೂ ಅವು ಸಮಾನಾಗಿ ದೊರೆಯುತ್ತವೆ. ದೇವರು ಬೆಳಕೆ ಹೊರತು ಕತ್ತಲೆ ಅಲ್ಲ. ಸತ್ಯವೇ ಹೊರತು ಅಸತ್ಯವಲ್ಲ. ಆತ ಸರ್ವಶಕ್ತನು. ನಾವು ಅವನ ಸೃಷ್ಟಿಯ ಕಣಗಳು. ನಾವು ವಿನಿತರಾಗೋಣ. ದೀನರನ್ನು ಮಾನ್ಯ ಮಾಡೋಣ. ದಯವೇ ಧರ್ಮದ ಮೂಲ" ಮುಂದುವರಿದು "ಬೇರೊಬ್ಬ ಅಧ್ಯಕ್ಷರಿಗೆ ಇಷ್ಟೊಂದು ಪ್ರೀತಿ ವಿಶ್ವಾಸ ದೊರಕಿರುವುದೆಂದು ತಿಳಿಯಲಾರೆ. ಪ್ರತಿನಿಧಿಗಳು ತೋರಿರುವ ಉದಾತ್ತವಾದ ಅಕ್ಕರೆ ಅಪ್ರತಿಮವಾದುದು. ಇದಕ್ಕಿಂತ ಮಿಗಿಲಾದನ್ನು ಪಡೆಯಲು ಯಾರು ಆಸೆಪಟ್ಟಿರಲಾರರು, ಪಡೆದಿರಲಾರರು. ನಾನು ಕೇಳಬಹುದಾದುದ್ದನ್ನೆಲ್ಲ ತಾವು ನನಗೆ ನೀಡಿರುವಿರಿ".

ಸ್ವಾತಂತ್ರ್ಯ ಪಡೆಯುವವರೆಗೆ ಹೋರಾಟ ನಿಲ್ಲಿಸುವುದಿಲ್ಲ ಅಸ್ಪೃಶ್ಯತಾ ನಿವಾರಣೆ, ಖಾದಿ ಪ್ರಚಾರ, ಗ್ರಾಮೋದ್ಯೋಗ, ಅಹಿಂಸೆ ಮುಂತಾದವುಗಳ ಬಗ್ಗೆ ಅರಿವು ನೀಡಿ ಕನ್ನಡಿಗರನ್ನು ಸ್ವಾತಂತ್ರ್ಯ ಚಳುವಳಿಗೆ ಹುರಿದುಂಬಿಸಿದರು. ಗಾಂಧಿ ಈ ಸಭೆಯಲ್ಲಿ ಸತ್ಯಾಗ್ರಹದ ಗುರಿ ವಿಧಾನ ಮತ್ತು ಸಿದ್ಧಾಂತಗಳನ್ನು ವಿವರಿಸಿದರು.

**ಅಧಿವೇಶನದ ನಿರ್ಣಯಗಳು:**

ಕಾಂಗ್ರೆಸ್ ಸದಸ್ಯತ್ವಕ್ಕೆ ಪ್ರತಿನಿಧಿ ಶುಲ್ಕವನ್ನು 10ರೂಗಳಿಂದ 1ರೂ.ಗೆ ಇಳಿಸಲಾಯಿತು. ಸಮ್ಮೇಳನದ ಮೇಲಿನ ಅತಿಯಾದ ವೆಚ್ಚವನ್ನು ಗಾಂಧೀಯವರು ಟೀಕಿಸಿದರು. ಕೋಹತ್ ಮತ್ತು ಗುಲ್ಬರ್ಗದಲ್ಲಿ ಭುಗಿಲೆದ್ದ ಗಲಭೆಗಳ ಕುರಿತು ನಿರ್ಣಯ ಮಂಡಿಸಲಾಯಿತು.. ಜಾತಿ ತಾರತಮ್ಯ ಮತ್ತು ತಿರುವಂಕೂರಿನ ವೈಕಂ ದೇವಸ್ಥಾನಕ್ಕೆ ಪ್ರವೇಶ ನಿರಾಕರಣೆಯ ವಿರುದ್ಧ ಪ್ರತಿಭಟಿಸುತ್ತಿದ್ದ ವೈಕಂನ ಸತ್ಯಾಗ್ರಹಿಗಳನ್ನು ಅಭಿನಂದಿಸಿತು.

**ಬೆಳಗಾಂ ಕಾಂಗ್ರೆಸ್ ಅನ್ನು ಏಕತಾ ಕಾಂಗ್ರೆಸ್ ಎಂದು ಸಹ ಕರೆಯುತ್ತಾರೆ:**

ಇದು ದೇಶದ ಸಮಗ್ರತೆಯನ್ನು ಒತ್ತಿ ಹೇಳಿತು ಹಿಂದೂಗಳು ಮುಸ್ಲಿಮರು, ಮಂದಗಾಮಿಗಳು ತೀವ್ರಗಾಮಿಗಳು ಇಲ್ಲಿ ಒಂದಾದರು. ಹಾಗೂ ಅಸಹಕಾರ ಚಳುವಳಿಯ ಸ್ಥಗಿತದಿಂದ ಕಾಂಗ್ರೆಸ್ ವಿಭಜನೆಗೊಂಡು ಸ್ವರಾಜ್ಯ ಪಕ್ಷ ಸ್ಥಾಪನೆಯಾಗಿದ್ದು, ಈ ಅಧಿವೇಶನದಲ್ಲಿ ಅದು ಕಾಂಗ್ರೆಸ್ಸಿನೊಂದಿಗೆ ಒಂದುಗೂಡುತ್ತದೆ. ಇದು ಹಿಂದೂ ಮುಸ್ಲಿಮರ ಐಕ್ಯತೆಯನ್ನು ಒತ್ತಿ ಹೇಳಿತು ಹೀಗೆ ಈ ಅಧಿವೇಶನ ಅಸ್ಪೃಶ್ಯತೆಯನ್ನು ಹೋಗಲಾಡಿಸಿ ಹಿಂದೂಮುಸ್ಲಿಮರ ನಡುವಿನ ಭಿನ್ನಾಭಿಪ್ರಾಯ ಹೋಗಲಾಡಿಸಲು ಪ್ರಯತ್ನಿಸಿದ ಐಕ್ಯತಾ ಸಮ್ಮೇಳನ ಎಂದು ಪರಿಗಣಿಸಲ್ಪಟ್ಟಿದೆ. ಸಹಸ್ರ ಕನ್ನಡಿಗರು ಇಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಳ್ಳುವುದಾಗಿ ಸಂಕಲ್ಪ ಮಾಡಿದರು.

**ಬೆಳಗಾಂ ಕಾಂಗ್ರೆಸ್ ಅಧಿವೇಶನದ ಮಹತ್ವ:**

ಬೆಳಗಾಂ ಕಾಂಗ್ರೆಸ್ ಅಧಿವೇಶನ, ಕನ್ನಡಿಗರ ಅಪೇಕ್ಷೆಗಳ ಪ್ರತೀಕವಾಗಿತ್ತು ಇದರಲ್ಲಿ ಅಧಿಕ ಸಂಖ್ಯೆಯ ಕನ್ನಡಿಗರು ಹುರುಪುಹುಮ್ಮಸ್ಸಿನಿಂದ ಭಾಗವಹಿಸಿದ್ದರು. ಅವರಿಗೆ, ಆವರೆಗೆ

ತಾವು ಪತ್ರಿಕೆಗಳಲ್ಲಿ ಹೆಸರು ಕೇಳಿದ್ದ ಇಲ್ಲವೇ ಭಾವಚಿತ್ರ ಮಾತ್ರ ಕಂಡ ಗಾಂಧಿ, ಮೌಲಾನಾ ಆಜಾದ್, ಮದನ್ ಮೋಹನ ಮಾಳವೀಯ ಹಲವಾರು ಗಣ್ಯನಾಯಕರನ್ನು ಕಾಣುವ ಅವಕಾಶ ಲಭಿಸಿತು. ಗಾಂಧಿ ಮತ್ತು ಇತರ ನಾಯಕರ ಭಾಷಣಗಳು, ವ್ಯಕ್ತಪಡಿಸಿದ ಭಾವನೆಗಳು ಮತ್ತು ಸಿದ್ಧಾಂತಗಳು ಕನ್ನಡಿಗರ ಮೇಲೆ ಮಹತ್ವದ ಪ್ರಭಾವ ಬೀರಿ ಇದರಿಂದ ಅಸಂಖ್ಯಾತ ಕನ್ನಡಿಗರು ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗವಹಿಸಲು ಮುಂದೆ ಬಂದರು. ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿ ಜನತಾ ಚಳುವಳಿಯಾಗಿ ಮಾರ್ಪಟ್ಟಿತು. ಅನೇಕ ನಿಷ್ಠಾವಂತ ನಾಯಕರು, ಕಾರ್ಯಕರ್ತರು ತಮ್ಮ ಜೀವಮಾನವನ್ನು ಸ್ವಾತಂತ್ರ್ಯ ಆಂದೋಲನಕ್ಕೆ ಮುಡಿಪಾಗಿಟ್ಟರು. ಗಾಂಧಿಯವರ ಸಾಮಿಪ್ಯ ಮತ್ತು ಸಂದೇಶಗಳು ಹಲವರ ಮನಮುಟ್ಟಿ ಅವರು ನಿಷ್ಠಾವಂತ ಕಾಂಗ್ರೆಸ್ಸಿನವರಾಗಲು ಸಾಧ್ಯವಾಯಿತು.

ಭವ್ಯವಾಗಿ ನಡೆದ ಬೆಳಗಾಂ ಕಾಂಗ್ರೆಸ್ ಅಧಿವೇಶನದ ದರ್ಶನಕ್ಕೆ ಕರ್ನಾಟಕದ ಮೂಲೆಮೂಲೆಗಳಿಂದ ಹೋದ ಸಾವಿರಾರು ಪ್ರೇಕ್ಷಕರು ಅಲ್ಲಿನ ವಾತಾವರಣದಿಂದಾಗಿ ರಾಷ್ಟ್ರೀಯ ವಿಚಾರಗಳಿಂದ ಪ್ರಚೋದಿತರಾಗಿಯೇ ಮರಳುವಂತಾಯಿತು. ಇದು ಕನ್ನಡಿಗರಿಗೆ ದೂರ ದೂರದ ರಾಷ್ಟ್ರ ನಾಯಕರನ್ನು ಪರಿಚಯಿಸಿತು. ಗಾಂಧೀಜಿ ಕನ್ನಡಿಗರಿಗೆ ತುಂಬಾ ಹತ್ತಿರವಾದರೂ ಕನ್ನಡಿಗರು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕುವಂತೆ ಪ್ರೇರೇಪಿಸಿದ ಬೆಳಗಾವಿ ಕಾಂಗ್ರೆಸ್ ಅಧಿವೇಶನದಿಂದ ಕರ್ನಾಟಕದಲ್ಲಿ ಗಾಂಧೀಜಿಯ ರಚನಾತ್ಮಕ ಕಾರ್ಯಕ್ರಮಗಳಿಗೆ ಹೆಚ್ಚು ಮಹತ್ವ ಬಂದಿತು. ಹಲವರು ಹರಿಜನೋದ್ಧಾರ, ಖಾದಿ ಪ್ರಚಾರ, ಮಹಿಳೆಯರ ಏಳಿಗೆ ಮುಂತಾದ ರಚನಾತ್ಮಕ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು.

**ಮೈಸೂರು ಸಂಸ್ಥಾನದ ಮೇಲೆ ಬೆಳಗಾಂ ಕಾಂಗ್ರೆಸ್ ಅಧಿವೇಶನದ ಪ್ರಭಾವ:**

ಕ್ರಿ. ಶ.1885ರ ರಾಷ್ಟ್ರೀಯ ಕಾಂಗ್ರೆಸ್‌ಗೆ ಮುನ್ನ ಭಾರತೀಯರಲ್ಲಿ ಸಮಗ್ರ ರಾಷ್ಟ್ರದ ಕಲ್ಪನೆಯೇ ಇರಲಿಲ್ಲ ಇದರ ಪರಿಣಾಮ ಮೊದಲು ಪ್ರತಿಧ್ವನಿಸಿದ್ದು ಬ್ರಿಟಿಷರ ನೇರ ಆಳ್ವಿಕೆಗೊಳಪಟ್ಟಿದ್ದ ಮುಂಬೈ ಕರ್ನಾಟಕ ಮತ್ತು ಮದ್ರಾಸ್ ಕರ್ನಾಟಕಗಳಲ್ಲಿ. ಆದರೆ ಈ ವೇಳೆ ಬ್ರಿಟಿಷರ ಪರೋಕ್ಷ ಆಳ್ವಿಕೆಯಲ್ಲಿದ್ದ ಮೈಸೂರು ಸಂಸ್ಥಾನದ ಜನರಲ್ಲಿ ಅಂತಹ ರಾಷ್ಟ್ರೀಯ ಪ್ರಜ್ಞೆ ಮೊಳೆಯಲಿಲ್ಲ. ಭಾರತದ ಉಳಿದೆಲ್ಲಾ ಭಾಗಗಳಲ್ಲಿ ಅದರ ವಲಯ ಕಚೇರಿಗಳನ್ನು ತೆರೆದರು ಇಲ್ಲಿ ಅದು ಆರಂಭವಾಗಿರುವುದು ತಡವಾಯಿತು ಕಾರಣ ಕಾಂಗ್ರೆಸ್ ಬ್ರಾಹ್ಮಣರ ಸಂಸ್ಥೆ ಎಂಬ ನಂಬಿಕೆ ಹುಟ್ಟಿ ಬ್ರಾಹ್ಮಣೇತರರು ಇದರಲ್ಲಿ ಸೇರಲು ಮುಂದಾಗಲಿಲ್ಲ.

1924ರ ಗಾಂಧಿ ಅಧ್ಯಕ್ಷತೆಯ ಬೆಳಗಾಂ ಸಮಾವೇಶ ಮೈಸೂರು ಸಂಸ್ಥಾನದ ಮೇಲೆ ಗಾಢವಾದ ಪ್ರಭಾವ ಬೀರಿತು. ಡಿಸೆಂಬರ್ 21ರಿಂದ 30ರವರೆಗೆ ಜರುಗಿದ ಈ ಅಧಿವೇಶನದಲ್ಲಿ ವಿವಿಧ ಗೋಷ್ಠಿಗಳನ್ನು ನಡೆಸಲಾಯಿತು. ರಾಷ್ಟ್ರೀಯತೆ, ಹರಿಜನೋದ್ಧಾರ, ಅಸ್ಪೃಶ್ಯತಾ ನಿವಾರಣೆ, ಖಾದಿ ಪ್ರಚಾರ, ಪಾನನಿರೋಧ, ಹಿಂದೂಮುಸ್ಲಿಮರ ಜೊತೆ, ಬ್ರಾಹ್ಮಣ ಬ್ರಾಹ್ಮಣೇತರ ಐಕ್ಯತೆ, ಮೂಲ ಶಿಕ್ಷಣ, ಗ್ರಾಮ ನೈರ್ಮಲ್ಯ ಮೊದಲಾದ ವಿಚಾರಗಳು ಚರ್ಚೆಗೊಳಪಟ್ಟವು ಇವೆಲ್ಲವುಗಳಿಗೂ ಮಿಗಿಲಾಗಿ ಸತ್ಯಗ್ರಹ ಚಳುವಳಿಯಲ್ಲಿ ಅಹಿಂಸೆ ಮತ್ತು ಐಕ್ಯತೆಗೆ ಹೆಚ್ಚು ಒತ್ತು ಕೊಡಲಾಯಿತು. ಡಿಸೆಂಬರ್ 28ರಂದು ಜರುಗಿದ ಬ್ರಾಹ್ಮಣೇತರರ ಸಮ್ಮೇಳನದ ಅಧ್ಯಕ್ಷತೆಯನ್ನು ಆರ್ಕಟ್ ರಾಮಸ್ವಾಮಿ ಮೊದಲಿಯಾರ್ ವಹಿಸಿದ್ದರು. ಶಿಕ್ಷಣ, ಸಾಮಾಜಿಕ ಸಮಾನತೆ, ಬ್ರಿಟಿಷ್ ಕಾಯ್ದೆ ಮತ್ತು ನ್ಯಾಯಾಡಳಿತದ ಹಿರಿಮೆಯನ್ನು ಕುರಿತು ವಿಚಾರ ಮಂಡಿಸಿದರು. 29ರಂದು ಜರುಗಿದ ಅಖಿಲ ಭಾರತ ಸಾಮಾಜಿಕ ಸಮ್ಮೇಳನದಲ್ಲಿ ಎನ್. ಸಿ. ಖೇಲ್ಕರ್ ರವರು ಸಂಸ್ಥಾನಗಳಲ್ಲಿನ ಜವಾಬ್ದಾರಿ ಸರ್ಕಾರಗಳನ್ನು ಕುರಿತು

ಮಾತನಾಡಿದರು. ಮೈಸೂರು ಸಂಸ್ಥಾನವೇ ಅಲ್ಲದೆ, ರಾಷ್ಟ್ರಮಟ್ಟದಲ್ಲಿ ರಾಷ್ಟ್ರೀಯ ಜಾಗೃತಿಯನ್ನು ಉಂಟು ಮಾಡುವಲ್ಲಿ ಈ ಸಮ್ಮೇಳನ ಯಶಸ್ವಿಯಾಯಿತು.

ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಬದನವಾಳು ಗ್ರಾಮದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಕೇಂದ್ರ ಸ್ಥಾಪನೆ, 1926 ರಲ್ಲಿ ಇದೆ ಸಮಯದಲ್ಲಿ ತಗಡೂರು ರಾಮಚಂದ್ರ ರಾಯರು ಕಣಿಯಾರ ಹರಿಜನರ ಸತ್ಯಾಗ್ರಹ ಆರಂಭಿಸಿದರು. ಇದು ಮೈಸೂರಿನ ಜನತೆಯನ್ನು ಸ್ವಾತಂತ್ರ್ಯದ ಆಂದೋಲನದಲ್ಲಿ ಸಕ್ರಿಯವಾಗಿ ಭಾಗವಹಿಸಲು ಪ್ರೇರಣೆ ನೀಡಿತು.

1927ರಲ್ಲಿ ಗಾಂಧೀಜಿಯವರು ವಿಶ್ರಾಂತಿಗಾಗಿ ನಂದಿ ಬೆಟ್ಟದಲ್ಲಿ ತಂಗಿದ್ದರು. ಈ ಸಮಯದಲ್ಲಿ ಅವರು ಮೈಸೂರು ಹಾಸನ ಚಿಕ್ಕಮಗಳೂರು ಶಿವಮೊಗ್ಗ ಬೆಂಗಳೂರು ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ್ದರಿಂದ ಸ್ವಾತಂತ್ರ್ಯ ಚಳುವಳಿ ಬಿರುಸಿಕೊಂಡಿತು. ತಗಡೂರು ರಾಮಚಂದ್ರರಾಯರು ಖಾದಿ ಪ್ರಚಾರ, ಅಸ್ಪೃಶ್ಯತಾ ವಿರೋಧ ಆಂದೋಲನಗಳನ್ನು ಆರಂಭಿಸಿದರು. ಮಂಡ್ಯ ಮತ್ತು ಶಿರಾಳಕೊಪ್ಪದಲ್ಲಿ ರೈತರು ಸರ್ಕಾರದ ವಿರುದ್ಧ ಕರ ನಿರಾಕರಣೆ ಚಳುವಳಿ ನಡೆಸಿದರು.

**ಕರ್ನಾಟಕದ ಏಕೀಕರಣ ಚಳುವಳಿಯಲ್ಲಿ ಬೆಳಗಾಂ ಕಾಂಗ್ರೆಸ್ ಅಧಿವೇಶನದ ಪ್ರಭಾವ:**

1924ರ ಬೆಳಗಾಂ ಕಾಂಗ್ರೆಸ್ ಅಧಿವೇಶನವು ಕರ್ನಾಟಕದ ಏಕೀಕರಣ ಚಳುವಳಿಯಲ್ಲಿ ಒಂದು ಪ್ರಮುಖ ಘಟ್ಟವಾಯಿತು. ಕನ್ನಡಿಗರಿಗೆ ತಮ್ಮ ನಾಯಕರನ್ನು ನೋಡುವ ಅವರ ಭಾಷಣ ಕೇಳುವ ಹಾಗೂ ತಮ್ಮ ಪೂರ್ವಿಕರ ವೈಭವದ ಬಗ್ಗೆ ಅರಿವು ಹೊಂದುವ ಅವಕಾಶ ಲಭಿಸಿತು. ಈ ಸಂದರ್ಭಕ್ಕಾಗಿಯೇ ಹುಯಿಲಗೋಳ ನಾರಾಯಣರವರು 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂಬ ನಾಡಗೀತೆ ಕಟ್ಟಿ ಅದನ್ನು ಹಾಡಲಾಯಿತು. ವೀಣೆ ಶೇಷಣ್ಣರಂತಹ ಪ್ರತಿಭಾನ್ವಿತ ವ್ಯಕ್ತಿಗಳು ತಮ್ಮ ಸಂಗೀತ ಸುಧೆಯನ್ನು ಜನರಿಗೆ ನೀಡಿದರು. ಬೆಳಗಾಂ ಸಮಾವೇಶ ಮುಗಿದ ಕೂಡಲೇ ಅದೇ ಸ್ಥಳದಲ್ಲಿ ಕರ್ನಾಟಕ ಏಕೀಕರಣ ಸಮ್ಮೇಳನವು ಜರುಗಿತು. ಇದರಲ್ಲಿ ಸಿದ್ದಪ್ಪ ಕಂಬಳಿ ಅಧ್ಯಕ್ಷತೆಯನ್ನು ವಹಿಸಿದ್ದರು ಈ ಸಮ್ಮೇಳನದಲ್ಲೇ ಕರ್ನಾಟಕ ಏಕೀಕರಣ ಸಭೆ ಅಸ್ತಿತ್ವಕ್ಕೆ ಬಂದಿತು. ಕರ್ನಾಟಕದ ಸಮಗ್ರತೆಯನ್ನು ಕುರಿತು ಗಂಭೀರವಾದ ಚರ್ಚೆಗಳು ನಡೆದವು ಆ ನಂತರ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಸಮಗ್ರ ಸಮಿತಿ ಎರಡು ವರ್ಷಕ್ಕೊಮ್ಮೆ ರಾಜ್ಯದ ವಿವಿಧ ಭಾಗಗಳಲ್ಲಿ ಸಭೆ ಸೇರಿ ಕರ್ನಾಟಕದ ಸಮಗ್ರತೆಯನ್ನು ಗಂಭೀರವಾಗಿ ಪರಿಗಣಿಸಿ ಅದರ ಪ್ರಚಾರ ಕಾರ್ಯ ಕೈಗೊಂಡಿತು.

**ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಪರಿಣಾಮಗಳು:**

ಅಧಿವೇಶನದಲ್ಲಿ ಭಾರತೀಯ ಸೇವಾದಳದ ಮುಖಂಡ ಎನ್ ಎಸ್ ಹರ್ಡಿಕರ್ 'ವಾಲಂಟಿಯರ್' ಎಂಬ ಇಂಗ್ಲಿಷ್ ಮಾಸಪತ್ರಿಕೆ ಮತ್ತು 'ಸ್ವಯಂಸೇವಕ' ಎಂಬ ಹಿಂದಿ ಮಾಸಪತ್ರಿಕೆಗಳನ್ನು ಆರಂಭಿಸಿ ಇಂಗ್ಲಿಷ್ ಜೊತೆಗೆ ಹಿಂದಿಯನ್ನು ಜನಪ್ರಿಯಗೊಳಿಸಿದರು. ಹಿಂದಿ ಪ್ರಚಾರ ಮುಂತಾದ ಕಾರ್ಯಕ್ರಮಗಳಲ್ಲಿ ಮೈಸೂರು ಮುಂದಾಯಿತು ಹಿಂದಿ ತರಗತಿಗಳನ್ನು ಪ್ರಾರಂಭಿಸಲು ಮತ್ತು ಶಾಲಾಕಾಲೇಜುಗಳಲ್ಲಿ ಹಿಂದಿಯನ್ನು ಐಚ್ಛಿಕ ವಿಷಯವನ್ನಾಗಿ ಮಾಡಲು ಎನ್ ಎಸ್ ಸುಬ್ಬರಾವ್, ಡಿ.ಕೆ. ಭಾರದ್ವಾಜ್ ಮತ್ತು ಪಿ. ಆರ್. ರಾಮಯ್ಯ ಅವರು ಕಾರಣರಾದರು. ಉತ್ತರ ಕರ್ನಾಟಕದಲ್ಲಿ ದೋಂಡೋ ಪಂತ ಸಹಸ್ರಬುದ್ಧೆಯವರು ಈ ಕಾರ್ಯ ನಡೆಸಿದರು

ಹುಬ್ಬಳ್ಳಿಯ ಕರ್ನಾಟಕ ಹರಿಜನ ಸಂಘ, ಹುಬ್ಬಳ್ಳಿ ಮತ್ತು ಬಿಜಾಪುರಗಳ ಹರಿಜನ ಬಾಲಿಕಾಶ್ರಮಗಳು ಅಸ್ಪೃಶ್ಯತಾ ನಿವಾರಣೆ ಮತ್ತು ದಲಿತರ ಸಾಮಾಜಿಕ ಆರ್ಥಿಕ ಒಳಿತಿಗಾಗಿ ಕೆಲಸ ಮಾಡತೊಡಗಿದವು ಹುಬ್ಬಳ್ಳಿಯ ಭಗಿನಿ ಮಂಡಳಿ ಮತ್ತು ಇತರ ಮಹಿಳಾ ಮಂಡಳಿಗಳು ಸ್ತ್ರೀ ಶಿಕ್ಷಣದ ನಿಟ್ಟಿನಲ್ಲಿ ಕಾರ್ಯೋನ್ಮುಕವಾದವು. ಇದರ ಪರಿಣಾಮವಾಗಿ ಅವರಲ್ಲಿ ರಾಜಕೀಯ ಪ್ರಜ್ಞೆ ಮೂಡುವಂತಾಯಿತು.

1925 ರಲ್ಲಿ ಅಖಿಲ ಭಾರತ ಖಾದಿ ಪ್ರಚಾರ ಮಂಡಳಿ ಸ್ಥಾಪಿಸಲಾಯಿತು. 1926ರಲ್ಲಿ ಬೆಳಗಾವಿನಲಿ ಖಾದಿ ಸಂಘ ಸ್ಥಾಪನೆಯಾಯಿತು ಮೈಸೂರಿನಲ್ಲೂ ಖಾದಿ ಮತ್ತು ಗ್ರಾಮೋದ್ಯೋಗಗಳಿಗೆ ಪ್ರೋತ್ಸಾಹ ನೀಡಲಾಯಿತು. ತೆರಕಣಾಂಬಿ, ಬದನವಾಳು ಖಾದಿ ಕೇಂದ್ರಗಳಾದವು. ಖಾದಿಯ ಕೆಲಸ ಮಾಡಿದವರಲ್ಲಿ ತಗಡೂರು ರಾಮಚಂದ್ರರಾವ್, ಹನುಮಂತ ರಾವ್ ಕೌಜಲಗಿ ಮತ್ತು ಜೆ.ದೇಶಪಾಂಡೆ ಮಂಜಪ್ಪ ಹರ್ಡೀಕರ್ ಕಾರ್ನಾಡ್ ಸದಾಶಿವರಾವ್ ಮತ್ತು ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ಇವರನ್ನು ಹೆಸರಿಸಬಹುದು. ಕರ್ಮವೀರ, ನವಶಕ್ತಿ, ಸತ್ಯಾಗ್ರಹಿ, ಕರ್ನಾಟಕ ವೈಭವ ಮುಂತಾದ ಪತ್ರಿಕೆಗಳು ಸಹ ಖಾದಿ ಪ್ರಚಾರ ಕಾರ್ಯ ನಿರ್ವಹಿಸಿದವು.

ಈ ಮಧ್ಯೆ ಜನ್ಮ ತಳೆದಿದ್ದ ಬ್ರಾಹ್ಮಣೇತರ ಸಂಘಗಳು ತಮ್ಮ ದೃಷ್ಟಿಕೋನದಲ್ಲಿ ಸ್ವಲ್ಪ ಬದಲಾವಣೆ ಕಂಡುಕೊಂಡವು. ಖಜಾರಿ ಸ್ವಾಮಿ ಅವರ ನೇತೃತ್ವದಲ್ಲಿ ಭಾರತೀಯ ಯುವಕ ಸಂಘ ಧಾರವಾಡದಲ್ಲಿ ಜನ್ಮ ತಾಳಿತು. ನಂತರ 1930 ಮೇ ನಲ್ಲಿ ಬೆಳಗಾಂನಲ್ಲಿ ಸಮಾವೇಶಗೊಂಡ ಬ್ರಾಹ್ಮಣೇತರ ಪರಿಷತ್ ಮತ್ತು ಹಾವೇರಿಯಲ್ಲಿ ಹರ್ಡೇಕರ್ ಮಂಜಪ್ಪ ಅವರ ಅಧ್ಯಕ್ಷತೆಯಲ್ಲಿ ಜರುಗಿದ ವೀರಶೈವ ಮಹಾಸಭಾ ತಮ್ಮ ಅನುಯಾಯಿಗಳಿಗೆ ಕಾಂಗ್ರೆಸ್ ಸೇರಲು ಕರೆ ನೀಡಿದವು. ಆರಂಭದ ದಿನಗಳಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ ಅನ್ನು ಬ್ರಾಹ್ಮಣರ ಸಂಸ್ಥೆ ಎಂದು ಟೀಕಿಸಲಾಗಿತ್ತು. ಈ ಸಂಸ್ಥೆಗಳ ಅನುಯಾಯಿಗಳು ಕಾಂಗ್ರೆಸ್ಸನ್ನು ಸೇರಬೇಕೆಂದು ಠರಾವು ಮಾಡಿದ್ದರಿಂದ ಬಹುಜನ ಸಮಾಜಗಳ ಮನಸ್ಸಿನಲ್ಲಿ ಕಾಂಗ್ರೆಸ್ಸಿನ ಬಗ್ಗೆ ಇದ್ದ ಶಂಕೆಗಳು ದೂರವಾಗಿ ಕಾಂಗ್ರೆಸ್ ಜನಸಾಮಾನ್ಯರನ್ನು ಬೃಹತ್ ಪ್ರಮಾಣದಲ್ಲಿ ಆಕರ್ಷಿಸುವಂತಾಯಿತು. ಹೀಗೆ ಬದಲಾದ ವಾತಾವರಣದಲ್ಲಿ ಕಾಂಗ್ರೆಸ್ ಜನಪ್ರಿಯಗೊಂಡು, ಚಟುವಟಿಕೆಯಿಂದ ಆಂದೋಲನಗಳಲ್ಲಿ ಭಾಗವಹಿಸತೊಡಗಿತು.

**ಬೆಳಗಾಂ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಆಚರಣೆ:**

ಐತಿಹಾಸಿಕ ಬೆಳಗಾಂ ಕಾಂಗ್ರೆಸ್ ಅಧಿವೇಶನಕ್ಕೆ 100 ವರ್ಷಗಳು ತುಂಬಿದ್ದು, 1924 ಡಿಸೆಂಬರ್ 26 ಮತ್ತು 27ರಂದು ಈ ಸಮ್ಮೇಳನವನ್ನು ಸ್ಮರಿಸುವ ನಿಟ್ಟಿನಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ, ಕುಂದಾನಗರಿ ಬೆಳಗಾವಿಯ ಅದೇ ಮಣ್ಣಿನಲ್ಲಿ ಶತಮಾನೋತ್ಸವವನ್ನು ಆಚರಿಸಿತು. ಎ.ಐ.ಸಿ.ಸಿ. ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸಮಾವೇಶದ ಅಧ್ಯಕ್ಷತೆಯನ್ನು ವಹಿಸಿದರು. ಲೋಕಸಭೆಯ ವಿಪಕ್ಷ ನಾಯಕ ರಾಹುಲ್ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಕಾಂಗ್ರೆಸ್ ಮುಖಂಡರ ದಂಡೆ ಸಮಾವೇಶದಲ್ಲಿ ಆಗಮಿಸಿತ್ತು. ತಿಲಕವಾಡಿಯ ವೀರ ಸೌಧದಲ್ಲಿ ಗಾಂಧಿ ಪ್ರತಿಮೆಯ ಲೋಕಾರ್ಪಣೆ, ಸ್ವಾತಂತ್ರ್ಯ ಯೋಧ ಗಂಗಾಧರರಾವ್ ದೇಶಪಾಂಡೆ ಅವರ ಸ್ಮಾರಕ ಭವನದ ಉದ್ಘಾಟನೆ ಮತ್ತು ಸುವರ್ಣ ಸೌಧದ ಆವರಣದಲ್ಲಿ ನಿರ್ಮಿಸಿದ್ದ ವಿಜ್ಞಾನ ಭವನದ ಉದ್ಘಾಟನೆ ಮಾಡಲಾಯಿತು.. ಅಧಿವೇಶನ ನಡೆದ ಸ್ಥಳವನ್ನು ಗಾಂಧೀಜಿಯ 'ನವನಗರ' ಎಂದು ಘೋಷಿಸಲಾಯಿತು. ಸಮಾವೇಶದ ಹೆಸರು 'ಜೈ ಬಾಪು ಜೈ ಭೀಮ್ ಜೈ ಸಂವಿದಾನ' ಈ

ಸಮಾವೇಶ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಯಿತು.

**ಉಪಸಂಹಾರ:**

ಹೀಗೆ ಬೆಳಗಾಂ ಕಾಂಗ್ರೆಸ್ ಅಧಿವೇಶನವು ಭಾರತದ ಸ್ವಾತಂತ್ರ್ಯ ಚಳುವಳಿಯ ಅಹಿಂಸಾತ್ಮಕ ಹೋರಾಟಕ್ಕೆ ಕಾಂಗ್ರೆಸನ್ನು ಬದ್ಧಗೊಳಿಸಿತು. ಮುಖ್ಯವಾಗಿ ಸತ್ಯಾಗ್ರಹ, ಅಹಿಂಸೆ, ಅಸಹಕಾರ ಚಳುವಳಿ, ಕಾನೂನು ಭಂಗ ಚಳುವಳಿ, ಖಾದಿ ಪ್ರಚಾರ, ಚರಕದ ಬಳಕೆ, ನೂಲುವುದು, ರಾಷ್ಟ್ರೀಯತೆ, ನೈರ್ಮಲ್ಯ, ಗ್ರಾಮಸ್ವರಾಜ್ಯ, ಗ್ರಾಮೋದ್ಯೋಗ, ರೈತರ ಆರ್ಥಿಕ ಉನ್ನತಿ, ಅಸ್ಪೃಶ್ಯತಾ ನಿವಾರಣೆ, ಹಿಂದೂ ಮುಸ್ಲಿಮರ ಐಕ್ಯತೆ, ಕಾಂಗ್ರೆಸ್ ಬಣಗಳ ಐಕ್ಯತೆ, ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳ ಸ್ಥಾಪನೆ, ಗೋ ಹತ್ಯ ನಿಷೇಧ, ಮಾದಕ ವಸ್ತುಗಳ ನಿರ್ಬಂಧ, ಪಾನನಿರೋಧ ಚಳುವಳಿ ಮೊದಲಾದ ಅಂಶಗಳ ಮೂಲಕ ರಾಜಕೀಯ ಸ್ವಾತಂತ್ರ್ಯದ ಜೊತೆಗೆ ಈ ಅಧಿವೇಶನ ಮತ್ತೊಮ್ಮೆ ವ್ಯಾಪಕವಾದ ಸಾಮಾಜಿಕ ಆರ್ಥಿಕ ಅಸಮಾನತೆಗಳು ಹಾಗೂ ಸುಧಾರಣೆಗಳನ್ನು ಒತ್ತಿ ಹೇಳಿತು. ಇದು ಕರ್ನಾಟಕದ ಸ್ವಾತಂತ್ರ್ಯ ಚಳುವಳಿಗೆ ಹೊಸ ತಿರುವನ್ನು ನೀಡಿತು. ಗಾಂಧೀಜಿ ಮೊದಲಾದ ಅನೇಕ ನಾಯಕರ ಅವಿರತ ಶ್ರಮದಿಂದ ಇದು ಕರ್ನಾಟಕಕಷ್ಟೇ ಸೀಮಿತವಾಗದೆ, ರಾಷ್ಟ್ರವ್ಯಾಪಿ ದೊಡ್ಡಮಟ್ಟದ ಆಂದೋಲನವಾಗಿ ಸ್ವತಂತ್ರ ಹೋರಾಟಕ್ಕೆ ಜನಸಾಗರವನ್ನು ಅಣಿಗೊಳಿಸಿತು. ಹೀಗೆ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಬೆಳಗಾಂ ಕಾಂಗ್ರೆಸ್ ಅಧಿವೇಶನ ಐತಿಹಾಸಿಕ ಸ್ಥಾನವನ್ನು ಪಡೆದಿದ್ದು ಅದರ ಪ್ರಭಾವ ಅಚ್ಚಳಿಯದು.

**ಪರಾಮರ್ಶನ ಗ್ರಂಥಗಳು:**


1. ಆಧುನಿಕ ಕರ್ನಾಟಕ (ಕ್ರಿ .ಶ.1565 1956) ಪಾಲಾಕ್ಷ
2. ಕರ್ನಾಟಕ ಒಂದು ಪರಿಚಯ ಡಾ. ರಂಗನಾಥ್
3. ಆಧುನಿಕ ಕರ್ನಾಟಕದ ಇತಿಹಾಸ (1961 2009) ಪ್ರೊ. ಸಿ. ಎನ್. ಲೋಕಪ್ಪ ಗೌಡ
4. ಆಧುನಿಕ ಕರ್ನಾಟಕ (ಕ್ರಿ. ಶ.1565 1956) ಪ್ರೊ. ಸುರೇಶ್ ರೈ. ಕೆ.
5. ಕರ್ನಾಟಕದ ಪ್ರೌಢ ಇತಿಹಾಸ ಮತ್ತು ಸಂಸ್ಕೃತಿ ಕೆ ಎನ್ ಎ
6. Indian National Congress [http://inc.in](http://inc.in)



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.